ಕರ್ನಾಟಕ ಸರ್ಕಾರ

# ವಿಶೇಷ ನೇಮಕಾತಿ ಸಮಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಆನಂದ್‌ರಾವ್ ವೃತ್ತ, ಬೆಂಗಳೂರು

---

ಸಂಖ್ಯೆ:ಎಸ್‌ಆರ್‌ಸಿ/01–ಎಫ್/2017–18(ಕಿ.ಆ.ಸ(ಮ)) ದಿನಾಂಕ: 15-09-2018

## ಪ್ರಕಟಣೆ

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ **ಕಿರಿಯ ಆರೋಗ್ಯ ಸಹಾಯಕರು (ಮಹಿಳೆ) ಹುದ್ದೆಗಳಿಗೆ** ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮುಖಾಂತರ ಸ್ಥಳ ಆಯ್ಕೆಮಾಡಿಕೊಳ್ಳುವ ಕುರಿತು.

ಉಲ್ಲೇಖ:
1. ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ: ಎಸ್‌ಆರ್‌ಸಿ/01/2017–18, ದಿನಾಂಕ: 30.05.2017
2. ವಿಶೇಷ ನೇಮಕಾತಿ ಸಮಿತಿ ಅಂತಿಮ ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ: ಸಂಖ್ಯೆ:ಎಸ್‌ಆರ್‌ಸಿ/01–ಎಫ್/2017–18(ಕಿ.ಆ.ಸ(ಮ)) ದಿನಾಂಕ: 04.09.2018
3. ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ:ಸಿಆಸುಇ/60/ಸೇನೆನಿ/2002 ದಿನಾಂಕ:27/11/2002 & ಸಿಆಸುಇ/119/ಸೇನೆನಿ/2010 ದಿನಾಂಕ: 18/10/2010
4. ಸರ್ಕಾರದ ಸುತ್ತೋಲೆ ಸಂಖ್ಯೆಸಿಆಸುಇ/76/ಸೆನೆನಿ/2018 ದಿನಾಂಕ: 15.02.2018
5. The Karnataka SCs, STs & OBC (Reservation of appointment, ETC)Rules 1992

**–**–**

ಉಲ್ಲೇಖ(1) & (2)ರ ಅಧಿಸೂಚನೆಯಲ್ಲಿ ವಿಶೇಷ ನೇಮಕಾತಿ ಸಮಿತಿಯಿಂದ ಆಯ್ಕೆಯಾಗಿರುವ **ಕಿರಿಯ ಆರೋಗ್ಯ ಸಹಾಯಕರು (ಮಹಿಳೆ)** ಹುದ್ದೆಗಳ ಅಭ್ಯರ್ಥಿಗಳಿಗೆ ಅಂತಿಮ ಆಯ್ಕೆಪಟ್ಟಿಯ ಕ್ರಮ ಸಂಖ್ಯೆ ಅನುಸಾರ ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಲಾಗುತ್ತಿದ್ದು, ಈ ಕೆಳಕಂಡ ವೇಳಾಪಟ್ಟಿಯಂತೆ ಕಡ್ಡಾಯವಾಗಿ ಅದೇ ದಿನಾಂಕದಂದು ಹಾಜರಾಗಲು ತಿಳಿಯಪಡಿಸಲಾಗಿದೆ. ಸದರಿ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ***ಕೌನ್ಸಿಲಿಂಗ್ ಹಾಲ್, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆ, ಕುಷ್ಠರೋಗ ಆಸ್ಪತ್ರೆ ಆವರಣ, ಮಾಗಡಿ ರಸ್ತೆ, ಬೆಂಗಳೂರು*** ಇಲ್ಲಿ ನಡೆಸಲಾಗುವುದು.

| ಅಂತಿಮ ಆಯ್ಕೆಪಟ್ಟಿ ಕ್ರ.ಸಂ. | ದಿನಾಂಕ | ಸಮಯ |
|---|---|---|
| ಹೈ–ಕ<br>1ರಿಂದ- 229 | 24.09.2018 | ಬೆಳಗ್ಗೆ 9.30 ರಿಂದ |
| ರಾಜ್ಯವೃಂದ<br>01 ರಿಂದ 300 | 25.09.2018 | ಬೆಳಗ್ಗೆ 9.30 ರಿಂದ |
| 301 ರಿಂದ 600 | 26.09.2018 | ಬೆಳಗ್ಗೆ 9.30 ರಿಂದ |
| 601ರಿಂದ 900 | 27.09.2018 | ಬೆಳಗ್ಗೆ 9.30 ರಿಂದ |
| 901 ರಿಂದ 1200 | 28.09.2018 | ಬೆಳಗ್ಗೆ 9.30 ರಿಂದ |
| 1201 ರಿಂದ 1386 | 29.09.2018 | ಬೆಳಗ್ಗೆ 9.30 ರಿಂದ |

**ಅಭ್ಯರ್ಥಿಗಳಿಗೆ ಸೂಚನೆ:–**

1. **ಕೌನ್ಸಿಲಿಂಗ್‌ಗೆ ಹಾಜರಾಗುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲಾತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.**

ಅ) ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ನವೀಕರಣ (Renewal) ಮಾಡಿಸದೆ ಇರುವ ಅಭ್ಯರ್ಥಿಗಳು ನವೀಕರಣ (Renewal) ಮಾಡಿಸಿರುವ ಪ್ರಮಾಣ ಪತ್ರ ಮತ್ತು ಮೂಲ ರಿಜಿಸ್ಟ್ರೇಷನ್ (Registration) ಪ್ರಮಾಣ ಪತ್ರ ಮತ್ತು **ಜೆರಾಕ್ಸ್ ಪ್ರತಿಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.**

ಆ) ಕೌನ್ಸಿಲಿಂಗ್‌ಗೆ ಹಾಜರಾಗಲು ವಿಶೇಷ ನೇಮಕಾತಿ ಸಮಿತಿಯಿಂದ ನೀಡಲಾದ ತಿಳುವಳಿಕೆ ಪತ್ರದ ಪ್ರತಿ.

ಇ) ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗಲು ನೀಡಿದ ಸೂಚನಾ ಪತ್ರ ಮತ್ತು ಪಾಸ್ ಪೋರ್ಟ್ ಅಳತೆಯ ಭಾವಚಿತ್ರ.

ಈ) ಮೂಲ ಭಾವಚಿತ್ರವಿರುವ ಯಾವುದಾದರು ಗುರುತಿನ ಚೀಟಿ ಮತ್ತು **ಜೆರಾಕ್ಸ್ ಪ್ರತಿ** (ಮತದಾನದ ಚೀಟಿ, ಆಧಾರ್ ಕಾರ್ಡ್, ರೇಷನ್ ಕಾರ್ಡ್, ವಾಹನ ಪರವಾನಗಿ)

2. ಸ್ಥಳ ಆಯ್ಕೆಗಾಗಿ ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಂಡ ಕಾರಣದಿಂದಾಗಿ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.

3. *ಜಾತಿ ಸಿಂಧುತ್ವ ಮತ್ತು ಹೈ-ಕ ಸಿಂಧುತ್ವ ಮತ್ತು ಪೋಲೀಸ್ ಪೂರ್ವಪರ ವರದಿಗಳು ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಸ್ವೀಕೃತವಾದ ನಂತರ ನೇಮಕಾತಿ ಆದೇಶ ನೀಡುವ ಷರತ್ತಿಗೊಳಪಟ್ಟು ಸ್ಥಳ ಆಯ್ಕೆಗೆ ಸಂಬಂಧಿಸಿದಂತೆ ಕೌನ್ಸಿಲಿಂಗ್‌ಗೆ ಹಾಜರಾಗಲು ಅವಕಾಶ ನೀಡಲಾಗಿದೆ.*

4. *ಸರ್ಕಾರಿ ಅಧಿಸೂಚನೆ (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ 2011ರ ಮತ್ತು ತಿದ್ದುಪಡಿ ನಿಯಮ 2013ರ ರೀತ್ಯ ಅಭ್ಯರ್ಥಿಗಳು ನೇಮಕಾತಿ ಹೊಂದಿದ ನಂತರ ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯವಾಗಿ ಕಾರ್ಯನಿರ್ವಹಿಸುವುದನ್ನು ನಿಯಮದಲ್ಲಿ ಅವಳಡಿಸಿರುವ ಕಾರಣ ಖಾಲಿ ಹುದ್ದೆ ಮಾಹಿತಿಯನ್ನು* ***ಗ್ರಾಮೀಣ ಪ್ರದೇಶದಲ್ಲಿರುವ ಬಹಳ ಅತ್ಯವಶ್ಯಕವಾಗಿ ಪ್ರಥಮ ಆದ್ಯತೆಯ ಮೇರೆಗೆ ಭರ್ತಿ ಮಾಡಲೇಬೇಕಾದ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಪ್ರಕಟಿಸಿರುವ ಖಾಲಿ ಇರುವ ಹುದ್ದೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ.***

5. ಮೀಸಲಾತಿಯಡಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು The Karnataka SCs, STs & OBC (Reservation of appointment, ETC) Rules 1992 ರನ್ವಯ ಸಿಂಧುತ್ವ ಪ್ರಮಾಣ ಪತ್ರವನ್ನು ಒಂದು ತಿಂಗಳ ಕಾಲಾವಧಿಯಲ್ಲಿ ಸಂಬಂಧಪಟ್ಟ ಪ್ರಾಧಿಕಾರಿಗಳು ನೀಡದಿದ್ದ ಪಕ್ಷದಲ್ಲಿ ಸದರಿ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಲಾಗುವುದು.

6. ನಡತೆ ಮತ್ತು ಪೂರ್ವ ಚರಿತ್ರೆಯ ಪೋಲೀಸ್ ವರದಿಯಲ್ಲಿ ಅಭ್ಯರ್ಥಿಯ ವಿರುದ್ಧ ದೂರು ದಾಖಲಾಗಿರುವ ಬಗ್ಗೆ ವರದಿಗಳು ಸ್ವೀಕೃತವಾದಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ಮುನ್ಸೂಚನೆ ಇಲ್ಲದೆ ರದ್ದುಗೊಳಿಸಲಾಗುವುದು.

7. ಹೈದರಾಬಾದ್-ಕರ್ನಾಟಕ ಮೀಸಲಾತಿಯಡಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಹೈ-ಕ ಪ್ರದೇಶದ ಕಲಬುರಗಿ, ಕೊಪ್ಪಳ, ರಾಯಚೂರು, ಬೀದರ್, ಬಳ್ಳಾರಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಹೈ-ಕ ಪ್ರದೇಶದ ಜಿಲ್ಲೆಗಳ ಖಾಲಿ ಹುದ್ದೆಗಳನ್ನು ಹೊರತುಪಡಿಸಿ ಬೇರೆ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ನೀಡಲಾಗುವುದಿಲ್ಲ.

8. ಅಭ್ಯರ್ಥಿಗಳು ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ಯಾವುದೇ ಸ್ಥಳ ಮಾರ್ಪಾಡುಗಳಿಗೆ ಅವಕಾಶವಿರುವುದಿಲ್ಲ.

9. ಖಾಲಿ ಹುದ್ದೆಗಳ ಮಾಹಿತಿಯನ್ನು ಕೌನ್ಸಿಲಿಂಗ್ ಮುನ್ನಾ ಇಲಾಖೆಯ ವೆಬ್‌ಸೈಟ್ **www.karhfw.gov.in/drc.aspx** ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗುವುದು.

10. ಕೌನ್ಸಿಲಿಂಗ್ ಸ್ಥಳದಲ್ಲಿ ಅಭ್ಯರ್ಥಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿರುತ್ತದೆ.

11. ಅಭ್ಯರ್ಥಿಗಳು ಕೌನ್ಸಿಲಿಂಗ್‌ಗೆ ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಲು ಸೂಚಿಸಲಾಗಿದೆ.

12. ಕೌನ್ಸಿಲಿಂಗ್‌ಗೆ ಗೈರುಹಾಜರಾದ ಅಭ್ಯರ್ಥಿಗಳಿಗೆ ಮತ್ತೊಮ್ಮೆ ಅವಕಾಶ ನೀಡಲಾಗುವುದಿಲ್ಲ.

13. **ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್‌ಗೆ ಹಾಜರಾಗಲು ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ನೀಡಿರುವ ದೂರವಾಣಿ ಸಂಖ್ಯೆಗಳಿಗೆ ಎಸ್.ಎಂ.ಎಸ್ ಹಾಗೂ ಇ-ಮೇಲ್ ಮುಖಾಂತರ ತಿಳಿಸಲಾಗಿದ್ದು ಮತ್ತು ಅಂಚೆ ಮೂಲಕ ಸೂಚನಾ ಪತ್ರ ರವಾನಿಸಲಾಗಿದೆ.**

**ವಿಶೇಷ ಸೂಚನೆ:-** ಪೋಲೀಸ್ ಪೂರ್ವಾಪರ ವರದಿ, ಜಾತಿ ಸಿಂಧುತ್ವ ವರದಿ, ಮತ್ತು ಹೈ-ಕ ಸಿಂಧುತ್ವ ವರದಿಗಳನ್ನು ನೀಡಲು ಸಂಬಂಧಿಸಿದ ಜಿಲ್ಲಾ ಪೋಲೀಸ್ ಅಧೀಕ್ಷಕರು ಮತ್ತು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಪತ್ರಗಳನ್ನು ರವಾನಿಸಲಾಗಿದ್ದು, ಸದರಿ ವರದಿಗಳನ್ನು ಪಡೆಯುವ ಸಂಬಂಧ ಅಭ್ಯರ್ಥಿಗಳು ಸಂಬಂಧಪಟ್ಟ ಕಛೇರಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಸಂಪರ್ಕಿಸಲು ಸೂಚಿಸಿದೆ.

15/9

**ಮುಖ್ಯ ಆಡಳಿತಾಧಿಕಾರಿ,**
ಆರೋಗ್ಯ ಮತ್ತು ಕು.ಕ.ಸೇವೆಗಳು.